ಮೂಲ ದಾವಾ ಸಂಖ್ಯೆ 262/2014 ಡಿ ಡಬ್ಲ್ಯೂ 3 ಬಿ ಸತೀಶ್ ಬಿನ್ ಲೇಟ್ ನರಸಿಂಹಮೂರ್ತಿ

(ದಿನಾಂಕ 12-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನಾನು ವೃತ್ತಿಯಿಂದ ಸೈಟುಗಳನ್ನು ಮಾರಾಟ ಮಾಡುವ ಮೂಾಲಕ ಕಮಿಷನ್ ಏಜೆಂಟ್ ಆಗಿ ಕೆಲಸ ಮಾಡುತ್ತೇನೆ. ನನಗೆ 4 ರಿಂದ 8 ನೇ ಪ್ರತಿವಾದಿಗಳು ತುಂಬಾ ಪರಿಚಯಸ್ಥರು ಎಂದರೆ ಸರಿ. ನನಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಇರುತ್ತದೆ. ನನಗೆ ವಾದಿ ಮತ್ತು ಪ್ರತಿವಾದಿಗಳ ಬಗ್ಗೆ ಮಾಹಿತಿ ಇರುತ್ತದೆ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ.

ಸದರಿ ದಾವೆಯನ್ನು ಧ್ರಾಕ್ಷಾಯಣಮ್ಮ ಮತ್ತು ದೇವಕ್ಕ ಹಾಕಿರುತ್ತಾರೆ. ಯಾವ ಪರಿಹಾರವನ್ನು ಕೇಳಿ ದಾವೆಯನ್ನು ದಾಖಲಿಸಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ನನಗೆ ದಾವಾ ಸ್ವತ್ತುಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ.306 ಇದು ಒಟ್ಟು 5 ಎಕರೆ 51 ಸೆಂಟ್ಸ ಇರುತ್ತದೆ. ಸರ್ವೆ ನಂ. 306 ರ 5 ಎಕರೆ 51 ಸೆಂಟ್ಸಗೆ ಚಕ್ಕುಬಂದಿ ಪೂಃ ಬಂಡಿ ರಸ್ತೆ, ಪಃ ಸರ್ವೆ ನಂ. 7 ಬಿ-3 ರ ಉಳಿದ ಜಾಗ, ಉಃ ರೆಡ್ಡಿ ಬಸವನಗೌಡರ ಜಮೀನು ಮತ್ತು ದಃ ರಸ್ತೆ ಬರುತ್ತದೆ. ನಾನು ಸದರಿ ಚಕ್ಕುಬಂದಿಯನ್ನು ಪ್ರವೀಣ್ ಪಾಟೀಲ್ ರವರ ಖರೀದಿ ಪತ್ರದಲ್ಲಿ ನೋಡಿರುತ್ತೇನೆ. ಸದರಿ ಖರೀದಿ ಪತ್ರದ ಆಧಾರದ ಮೇಲೆ ನಾನು ಚಕ್ಕುಬಂದಿಯನ್ನು ಹೇಳಿರುತ್ತೇನೆ. ಪ್ರವೀಣ್ ಪಾಟೀಲ್ ರವರು ಸದರಿ ಆಸ್ತಿಯನ್ನು ಯಾರಿಂದ ಮತ್ತು ಯಾವಾಗ ಖರೀದಿ ಮಾಡಿದರೆಂದು ಹೇಳಲಾಗುವುದಿಲ್ಲ. ಇದರ ಬಗ್ಗೆ ನಾನು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ.

ದಾವಾಸ್ತಿಯು ಮೂಲತಃ ದೇವಕ್ಕ ಮತ್ತು ಅವರ ಗಂಡನಿಗೆ ಹಾಗೂ ಪ್ರತಿವಾದಿಯ ಗಂಡನಿಗೆ ಸಂಬಂಧಪಟ್ಟಂತಹ ಆಸ್ತಿಗಳಾಗಿರುತ್ತವೆಂದರೆ ಸರಿ. ದಾವಾಸ್ತಿಗಳನ್ನು ವಾದಿಯ ಗಂಡನಾದ ಪಿ.ವೀರನಗೌಡ ಮತ್ತು 1 ನೇ ಪ್ರತಿವಾದಿಯ ಗಂಡನಾದ ಆರ್

ಪಂಪನಗೌಡ ಇವರಿಬ್ಬರೂ ಸೇರಿ ದಿಃ 09-05-1963 ರಂದು ರೂ.400 ಗಳಿಗೆ ಅಡಿವೆಪ್ಪ ಮತ್ತು ಕೆಂಚಪ್ಪ ಬಿನ್ ಗೊಲ್ಲರ ಮರಿಯಜ್ಜರವರಿಂದ ನೊಂದಾಯಿತ ಖರೀದಿಪತ್ರದ ಮೂಲಕ ಖರೀದಿಸಿದ್ದರು ಎಂದರೆ ಸರಿ.

1963 ರಲ್ಲಿ ದಾವಾಸ್ತಿಗಳನ್ನು ಖರೀದಿಸಿದ ನಂತರ ಸದರಿ ಆಸ್ತಿಗಳು ದೇವಕ್ಕ ಮತ್ತು ದ್ರಾಕ್ಷಾಯಣಮ್ಮರವರ ಹೆಸರಿನಲ್ಲಿದ್ದವು ಎಂದರೆ ಸರಿ. ಇಂದಿಗೂ ದೇವಕ್ಕನ ಭಾಗದಲ್ಲಿರುವ ಆಸ್ತಿಯಲ್ಲಿ ಆಕೆ ಸ್ವಾಧೀನದಲ್ಲಿರುತ್ತಾರೆಂದರೆ ಸರಿ.

ದಾವಾಸ್ತಿಗಳು ಬಸವನಗೌಡರಿಗೆ ಹೇಗೆ ಬಂದಿರುತ್ತದೆಂದು ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿ. ಇದರ ಬಗ್ಗೆ ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲವೆಂದರೆ ಸರಿ, ನಾನು ಕೇವಲ ದಾಖಲಾತಿಗಳ ಆಧಾರದ ಮೇಲೆ ನಾನು ವ್ಯವಹಾರಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿ. 4 ರಿಂದ 8 ನೇ ಪ್ರತಿವಾದಿಗಳು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನನಗೆ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲವೆಂದರೆ ಸರಿ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ